# ಡಿ–ಗ್ಲಾಮ್ ಪಾತ್ರದ ಹಂಬಲದಲ್ಲಿ ಅಕ್ಷಿತಾ

**ಕೊಡಗಿನ ನಟಿ ಅಕ್ಷಿತಾ ಬೋಪಯ್ಯ ಅವರು ಕನ್ನಡದೊಂದಿಗೆ ತಮಿಳು, ಮಲಯಾಳಂ ಸಿನಿಮಾರಂಗದಲ್ಲಿಯೂ ಗುರುತಿಸಿಕೊಳ್ಳುವ ಹಾದಿಯಲ್ಲಿದ್ದಾರೆ. ಡಿ–ಗ್ಲಾಮ್ ಪಾತ್ರಗಳಲ್ಲಿ ತಮ್ಮನ್ನು ಅಭಿವ್ಯಕ್ತಿಸಿಕೊಳ್ಳುವುದು ಅವರ ಇಂಗಿತ.**

■ ಎಸ್ಸೆನ್

ಕೊಡಗಿನಲ್ಲಿ ಹುಟ್ಟಿ ಬೆಳೆದು ಮೈಸೂರಿನಲ್ಲಿ ಪದವಿ ಓದುತ್ತಿದ್ದ ಅಕ್ಷಿತಾ ಬೋಪಯ್ಯ ಅವರಿಗೆ ಓದುವ ಸಂದರ್ಭದಲ್ಲೇ ಝೀ ಕನ್ನಡದ ‘ರೋಬೊ ಫ್ಯಾಮಿಲಿ’ ಶೋನಲ್ಲಿ ಭಾಗಿಯಾಗುವ ಅವಕಾಶ ಬಂದದ್ದು ಅವರ ಬದುಕಿನ ದಿಕ್ಕನ್ನು ಬದಲಾಯಿಸಿತ್ತು. ಕೆಲವು ಎಪಿಸೋಡ್‌ಗಳನ್ನು ಮಾಡುತ್ತಲೇ, ಸಿನಿಮಾ ಅವಕಾಶವೂ ಅರಸಿ ಬಂದಿತ್ತು.

‘ರಿಯಲ್ ಪೊಲೀಸ್’ ಮೂಲಕ ಸಿನಿಮಾರಂಗಕ್ಕೆ ಕಾಲಿಟ್ಟ ಅಕ್ಷಿತಾಗೆ ಒಂದಾದ ನಂತರ ಒಂದರಂತೆ ಸಿನಿಮಾ ಅವಕಾಶಗಳು ದೊರೆತದ್ದು, ಸಿನಿಮಾರಂಗದಲ್ಲಿಯೇ ಉಳಿಯಲು ಪ್ರೇರಣೆಯಾಗಿತ್ತು. ‘ಅಂಬಿ ನಿಂಗ್ ವಯಸ್ಸಾಯ್ತೋ’, ‘ಐ ಲವ್ ಯೂ ಬ್ರಹ್ಮಚಾರಿ’ ಸೇರಿದಂತೆ ಕೆಲವು ಸಿನಿಮಾಗಳಲ್ಲಿ ತೊಡಗಿಕೊಂಡಿರುವಾಗಲೇ ತಮಿಳು ಕಿರುತೆರೆ ಕೈಬೀಸಿ ಕರೆದಿತ್ತು. ಸಿನಿಮಾ, ಕಿರುತೆರೆಯಲ್ಲಿ ಏಕಕಾಲಕ್ಕೆ ತೊಡಗಿಕೊಂಡ ಅವರಿಗೆ ನಟನೆಯ ಮೂಲಸೂತ್ರಗಳು ಅರಿವಾಗತೊಡಗಿದವು.

ಈಚೆಗೆ ಕನ್ನಡದಲ್ಲಿ ಅವರ ಅಭಿನಯದ ‘ಕಮಲ್ ಶ್ರೀದೇವಿ’, ‘ಫ್ಲರ್ಟ್’ ಚಿತ್ರಗಳು ಬಿಡುಗಡೆಯಾಗಿದ್ದು, ಸದ್ಯ ‘ಚೆಂಕೋಲ್’ ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ. ಈ ಸಿನಿಮಾದಲ್ಲಿ ವಿಶಿಷ್ಟವಾದ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ತಮಿಳು ಸಿನಿಮಾರಂಗದಲ್ಲಿಯೂ ‘ವೋವೆಲ್ಸ್’ ಎಂಬ ಸಿನಿಮಾ ಮೂಲಕ ರುಜು ಹಾಕಿದ್ದು, ಈಚೆಗೆ ಆ ಸಿನಿಮಾ ಬಿಡುಗಡೆ ಕಂಡಿದೆ. ತಮಿಳಿನದ್ದೇ ಮತ್ತೊಂದು ಸಿನಿಮಾದಲ್ಲಿಯೂ ನಟಿಸುತ್ತಿರುವುದು ಅವರ ಉತ್ಸಾಹವನ್ನು ಇಮ್ಮಡಿಗೊಳಿಸಿದೆ.

ಅಕ್ಷಿತಾ ನಟನೆಗೆ ಬರಲು ಅವರ ಅಜ್ಜಿಯ ಒತ್ತಾಸೆಯೂ ಕಾರಣವಾಗಿದೆ. ಭರತನಾಟ್ಯ ಕಲಾವಿದೆಯಾಗಿದ್ದ ಅವರಿಗೆ ನಟನೆಗೆ ಬರಬೇಕೆಂಬ ಉದ್ದೇಶವಿಲ್ಲದಿದ್ದರೂ ಅಚಾನಕ್ಕಾಗಿ ಸಿಕ್ಕಿದ ಅವಕಾಶ ಅವರಲ್ಲಿ ಅಭಿನಯದ ಹಂಬಲ ತುಂಬಿದೆ.

‘ನಾನು ಭರತನಾಟ್ಯ ಕಲಾವಿದೆ. ನನ್ನ ಅಜ್ಜಿಗೆ ನನ್ನನ್ನು ಧಾರಾವಾಹಿಯಲ್ಲಿ ಸಿನಿಮಾದಲ್ಲಿ ಕಾಣಬೇಕೆಂಬ ಆಸೆಯಿತ್ತು. ಅವರ ಆಸೆಯನ್ನು ಕೇಳಿ ಇದೆಲ್ಲ ಸಾಧ್ಯವೇ ಎಂದು ನನಗೆ ನಗು ಬರುತ್ತಿತ್ತು. ಅವರ ಆಸೆ ಕೊನೆಗೂ ನೆರವೇರಿತು. ಸಿನಿಮಾರಂಗಕ್ಕೆ ಬಂದು ಒಂಬತ್ತು ವರ್ಷಗಳು ಕಳೆದಿವೆ. ಒಳ್ಳೆಯ ಸಿನಿಮಾ ಅವಕಾಶಗಳು ದೊರೆಯುತ್ತಿವೆ. ಬೇರೆ ಬೇರೆ ಭಾಷೆಗಳಲ್ಲಿ ಅಭಿನಯಿಸುವ ಸುಯೋಗವೂ ಸಿಕ್ಕಿದೆ’ ಎಂದು ನೆನಪಿಸಿಕೊಳ್ಳುತ್ತಾರೆ.

ಅಕ್ಷಿತಾಗೆ ಕನ್ನಡದೊಂದಿಗೆ ತಮಿಳು, ತೆಲುಗು, ಮಲಯಾಳಂ ಭಾಷೆಯ ಹೆಚ್ಚೆಚ್ಚು ಸಿನಿಮಾಗಳಲ್ಲಿಯೂ ನಟಿಸಬೇಕೆಂಬ ತುಡಿತ. ಮಲಯಾಳಂ ಸಿನಿಮಾ ಅವಕಾಶವೊಂದು ದೊರೆತಿದ್ದು, ಶೀಘ್ರದಲ್ಲಿಯೇ ಘೋಷಣೆಯಾಗುತ್ತಿರುವುದು ಅವರ ಖುಷಿಯನ್ನು ಹೆಚ್ಚು ಮಾಡಿದೆ.

‘ಪ್ರತಿಯೊಂದು ಭಾಷೆಯಲ್ಲಿಯೂ ಸಿನಿಮಾ ಮಾಡಬೇಕೆಂದು ಮುಂಚಿನಿಂದಲೂ ನನಗೆ ಆಸೆಯಿತ್ತು. ತಮಿಳಿನಲ್ಲಿ ಧಾರಾವಾಹಿಯಲ್ಲಿ ನಟಿಸಲು ಆರಂಭಿಸಿದಾಗ ಸಿನಿಮಾಗೆ ಬರಬೇಕೆಂದು ಗಂಭೀರವಾಗಿ ಯೋಚಿಸಿರಲಿಲ್ಲ. ಜೊತೆಯಲ್ಲಿದ್ದವರು, ಯಾಕೆ ನೀನು ಸಿನಿಮಾಗೆ ಪ್ರಯತ್ನಿಸಬಾರದು ಎಂದು ನನ್ನನ್ನು ಪ್ರೇರೇಪಿಸಿದರು. ಪ್ರಯತ್ನ ಮಾಡೋಣ ಎಂದು ಸಿನಿಮಾಗಳೆಡೆಗೆ ಬಂದೆ’ ಎಂದು ತಮ್ಮ ದಾರಿಯನ್ನು ಬಿಚ್ಚಿಟ್ಟರು ಅಕ್ಷಿತಾ.

ಇದುವರೆಗೂ ಸಿಕ್ಕ ಪಾತ್ರಗಳು ತೃಪ್ತಿಕರವಾಗಿವೆ ಎನ್ನುವ ಅಕ್ಷಿತಾ ಅವರು ವಿಭಿನ್ನ ಪಾತ್ರಗಳಲ್ಲಿ ತಮ್ಮನ್ನು ಅಭಿವ್ಯಕ್ತಗೊಳಿಸುವ ಪ್ರಯತ್ನದಲ್ಲಿದ್ದಾರೆ. ಇದರೊಂದಿಗೆ ‘ಡಿ–ಗ್ಲಾಮ್ ಲುಕ್’ನಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ಅವರ ಬಹುದಿನಗಳ ಆಸೆ. ಗ್ಲಾಮರಸ್ ಹೊರತಾಗಿಯೂ ಪರ್ಫಾರ್ಮೆನ್ಸ್ ಮೂಲಕ ಗುರುತಿಸಿಕೊಳ್ಳಬೇಕೆಂಬ ಗುರಿ. ಜೊತೆಗೆ ಮಾಸ್ ಹೀರೊಯಿನ್ ಆಗಿ, ಮಹಿಳಾ ಪ್ರಧಾನ ಸಿನಿಮಾಗಳಲ್ಲಿಯೂ ಅಭಿನಯಿಸಬೇಕೆಂಬುದು ಅವರ ಇಷ್ಟದ ಪಟ್ಟಿಯಲ್ಲಿದೆ.

ಅಕ್ಷಿತಾ ಅಭಿನಯದ ‘ಧರಣಿ’ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದ್ದು, ‘ಚೆಂಕೋಲ್’ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ತಮಿಳು, ಮಲಯಾಳಂನ ಸಿನಿಮಾಗಳೂ ಸರದಿಯಲ್ಲಿವೆ. ■

